7. ಚಿನ್ನಕೆಲಸದ ಲಿಂಗಣ್ಣಾಚಾರಿ
8. ಚಿನ್ನಕೆಲಸದ ವೇಲಾಯುಧಾಚಾರಿ
9. ಮರಕೆಲಸದ ವೈಯಾಪುರಿಯಾಚಾರಿ
10. ಚಿನ್ನಕೆಲಸದ ದೊಡ್ಡಸುಬ್ಬಣ್ಣಾಚಾರಿ
11. ಹುಣಸೂರು ಟವರ್ಗೆ ಕೇರಿದ ಕುಲ್ಲುಕುಣಿಕೆಯಲ್ಲಿರುವ ನರಸುಹ್ಮಾಚಾರಿ
12. ಡಿಟೋ ಲಕ್ಷ್ಮೀಪತಿಯಾಚಾರಿ
13. ಡಿಟೋ ಲಕ್ಕಣ್ಣಾಚಾರಿ
14. ಹುಣಸೂರಲ್ಲಿಯಿರುವ ಮರಗೆಲಸದ ಷಣ್ಮುಖಾಚಾರಿ ವಗೈರೆ

ಪ್ರತಿವಾದಿಗಳು—ಹುಣಸೂರಲ್ಲಿಯಿರುವವರು,

1. ರಾಮಸ್ವಾಮಿ ಆಚಾರಿ ಮಗ ಕುಳ್ಳಾಚಾರಿ
2. ಚಿನ್ನಕೆಲಸದ ಕೇಷವಾಚಾರಿ
3. ಚಿನ್ನಕೆಲಸದ ಡಿಟೋ ನರಸಾಚಾರಿ
4. ಬಿಳಿಕೆರೆನಂಜಪ್ಪಾಚಾರಿ
5. ನಾರಾಯಣಸ್ವಾಮಿ ಆಚಾರಿ
6. ಡಿಟೋ ಕಂಚುಗಾರ ಅಮಯಪ್ಪಾಚಾರಿ
7. ಡಿಟೋ ಮರಕೆಲಸದ ಕಾಳಪ್ಪಾಚಾರಿ ವಗೈರೆ

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಹುಣಸೂರು ಟವನಿನಲ್ಲಿ ಯಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಮೇಲ್ಕಂಡ ವೊಕದ್ದಮೆಯಲ್ಲಿನ ವಾದಿಯಾದವರು, ಈ ವೊಕದ್ದಮೆಯನ್ನು ತಮ್ಮ ಪರವಾಗಿಯೂ ಮತ್ತು ತಮ್ಮ ಜಾತಿ ಇತರ ಜನಗಳ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿದ್ದಾರೆಂದೂನ್ನೂ 1—2ನೇ ವಾದೀರು ಈ ಛತ್ರದ ಸುಘರ್ದನ್ನು ಹೊಂದಲು, ಮತ್ತು ಈ ಛತ್ರಕ್ಕೆ ಬೀಗಹಾಕುವದು ತೆಗಿಯುವದು ವಗೈರೆಯನ್ನು ಈ ಛತ್ರದ ಇತರ ಆಡಳಿತಗಳನ್ನ ನಡಿಸಲು, ಹಕ್ಕುದಾರರೆಂತ್ತ ಹಕ್ಕು ಸ್ಥಾಪಿಸಿ ಪ್ರತಿವಾದೀರಿಂದ ಛತ್ರವನ್ನು ವಾದೀರ ಸುಘರ್ದಿಗೆ ಕೊಡಿಸಬೇಕೆಂತಲೂ ಮತ್ತು ಪ್ರತಿವಾದೀರೆಲ್ಲರೂ ಸಹ 1—2ನೇ ವಾದೀರ ಅನುಭವದಲ್ಲಿ ಹತ್ತು ಜನರಂತೆ ವುಪಾಕರ್ಮ, ಶಿವರಾತ್ರೆ, ಭಜನೆ, ಜಾತಿ ಪಂಚಾಯಿತಿ ವಗೈರೇ ಎಲ್ಲಾ ಕೆಲಸಗಳಿಗೂ ಸಹ ಈ ಛತ್ರಕ್ಕೆ ಪ್ರವೇಶಿಸಿ ಈ ಛತ್ರವನ್ನು ವುಪಯೋಗಿಸಬಹುದೆಂತ್ತಲೂ ಮತ್ತು ಮೈಸೂರು ಟವರ್ಮ ಮೇಜಿಸ್ಟ್ರೇಟರವರು ಮಾಡಿದ 1894—95ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ 232ನೇ ನಂಬರು ಆರ್ಡರನ್ನು ರದ್ದುಪಡಿಸಿ ಹಾಲಿ ಪ್ರತಿವಾದೀರು, ವಾದೀರು ಛತ್ರಕ್ಕೆ ಪ್ರವೇಸಿಸಿ ಛತ್ರವನ್ನು ವುಪಯೋಗಿಸಲು ಇರುವ ಪ್ರತಿಬಂಧಕವನ್ನು ತಪ್ಪಿಸಬೇಕೆಂತಲೂ,

B. ಹಾಗೆ ವಾದೀರೊಬ್ಬರೇ ಸುಘರ್ದು ಹೊಂದಲು ಅಥವಾ 1—2ನೇ ವಾದೀರಲ್ಲಿ ಪ್ರವೇಶಿಸಬೇಕೆಂತ ಡಿಕ್ರಿಕೊಡಲು ಆಗುವದಿಲ್ಲವೆಂತ ಒಂದು ವೇಳೆ ಕೋರ್ಟಿನವರಿಗೆ ತೋರಿಬಂದಲ್ಲಿ ಪ್ರತಿವಾದೀರಂತೆ ವಾದೀರಿಗೂ ಈ ಛತ್ರದ ಜಂಟಿ ಸುಘರ್ದನ್ನು ಕೊಡಿಸಬೇಕೆಂತ್ತಲೂ,

C. ಈ ವೊಕದ್ದಮೆ ಕೋರ್ಟಿನ ಖರ್ಚು ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇನ್ನೂ ಇತರ ಪರಿಹಾರಗಳಿಗೂ ಸಹ ದಾವಾ ದಾಖಲ್ಮಾಡಿರುತ್ತಾರೆಂದೂನ್ನೂ ಸದರೀ ವೊಕದ್ದಮೆ 1896ನೇ ಇಸವಿ ಅಕ್ಟೋಬರು 29ನೇ ತಾರೀಖಿಗೆ ಯಿಷ್ಯೂಬಗ್ಗೆ ಹಿಯರಿಂಗು ಯಿಟ್ಟು ಇರುವದರಿಂದ ಈ ವೊಕದ್ದಮೆಕ್ಕೆ ಕಕ್ಷಿಗಾರನಾಗಿ ಕೇರಬೇಕೆಂದು ಯಿರುವ ಸಮಸ್ತ ಜನಗಳೂ ಈ ಕೋರ್ಟು ರೂಬರೂ ಮೇಲ್ಕಂಡ ತಾರೀಖಿಗೆ ಹಾಜರಾಗತಕ್ಕದ್ದೆಂದು ಪ್ರಸಿದ್ಧಪಡಿಸಿದೆ.

31—8—96.

ವಿ. ರಂಗಾಚಾರ್,
ಮುನ್ಸೀಫ್.

ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟ್ ಇದರಡಿ ಕಂಡ ಫಾರೆಸ್ಟ್ಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಚೆಗಳಿಗೆ ಸ್ಯ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಅಂಚೆ.	ಲದೈ ಮಾಡತಕ್ಕ ಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಜೆ ..	2,000	
		(2) ಬೈರಿಗದ್ದೆ ..	4,000	
		(3) ವನಕೆಗುಂಡಿಮಾಳ ..	2,000	
	ಐನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ತ್ಹಾಲ್ ಕಟ್ಟೆ ..	2,000	
	ಕಾಕನಕೋಟೆ ..	(1) ಆನೆಮಾಳ ..	2,000	
		(2) ತ್ಯಾಗದವುರದ ತಿಟ್ಟು ..	2,000	
		ಜುಮ್ಲಾ ..	20,000	

2. ತಮೊಂ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಚೆಗೆಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯಂಬುವದಾಗಿ ಮೇಲ್‌ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಬಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀನೋಟುಗಳಲಿ, ಯಾ ಪ್ರೊನೋಟುಗಳಲಿ ರವಾನಿಸಬೇಕು. ದರಖಾಸ್ತುಗಳು ಅಜಮಾಯಿಷಿಯಿಂದ ಮೇಲ್ಕಂಡ ಕರೆನ್ಸೀನೋಟುಗಳನ್ನು ಒಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರಿಗೆ ಅಂಗೀಕರಿಸಲ್ಪಡುವವು.

4. ದರಖಾಸ್ತು ಮಾಡಲು ಇಚ್ಛೈವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ಯೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ, ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟುವನ್ನು ಪ್ರತಿ ಯೊಂದು ಫಾರೆಸ್ಟಿನಿಂದಲೂ ಅಂಚೆಗೆಳಿಗೆ ಸಾಗಿಸುವದಕ್ಕೆ ಮಾತ್ರ, ಒಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಅಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸ್ಯ 1897ನೇ ಇಸವಿ ಜನವರಿ 17ರ ಒಳಗಾಗಿ ಮೇಲೆ ನಮೂದಿಸಿರುರ ಪೂರಾ ಮೊತ್ತವನ್ನು ಆಯಾಯ ಅಂಚೆಗಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ ಫಾರೆಸ್ಟು 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೇರೆ ನಡಿಯಲು ತಪ್ಪಿದಲ್ಲಿ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಕ್ಹಸರ್ವೇಟರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತ್‌ಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುವಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರವು.

10. ವುದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ನೋಟಿಸ್.

ಬೆಂಗಳೂರು ಸಬ್ ಡಿವಿಜನ್ ಮುನ್‌ಸಿಫ್ ಕೋರ್ಟು.

ಸ್ಯ 1895—96ನೇ ಇಸವಿ ಒರಿಜನಲ್ ನಂಬರ್ 900.

ವಾದಿಗಳು.	ಪ್ರತಿವಾದಿಗಳು.
ಕಾರ್ಕಾರಹಳ್ಳಿ ತಾಲ್ಲೂಕು ಮರುಳವಾಡಿ ಗ್ರಾಮದಲ್ಲಿ ಇರುವವರು.	ಕಾರ್ಕಾರನಹಳ್ಳಿ ತಾಲ್ಲೂಕು ಮರುಳವಾಡಿ ಗ್ರಾಮದಲ್ಲಿ ಇರುವವರು.
1ನೇ ಪಾಂಚಾಳದ ದೊಡ್ಡಾಚಾರಿ.	1ನೇ ಗಾಣಿಗರ ಜುಟ್ಟ.
2ನೇ ಪಾಂಚಾಳದ ಚವುಡಾಚಾರಿ.	2ನೇ 1ನೇ ಪ್ರತಿವಾದಿ ಹೆಂಡತಿ ಪುಟ್ಟನಂಜಮ್ಮ.
3ನೇ ಮುಂಟಿಗಾಚಾರಿ.	